ಇಲಾಖೆ / ವಿಷಯ: DEPARTMENT / SUBJECT: Other State

ಪತ್ರಿಕೆಯ ಹೆಸರು : NAME OF THE NEWS PAPER : Vijaya Vani    ದಿನಾಂಕ : DATE : 2/12/2019

# ಸರಯೂ ತಟದಲ್ಲಿ ಇಕ್ಷ್ವಾಕುಪುರಿ

## ಉತ್ತರಪ್ರದೇಶ ಸರ್ಕಾರದಿಂದ ಹೊಸ ಯೋಜನೆ



**ಲಖನೌ:** ಅಯೋಧ್ಯೆ ರಾಮಮಂದಿರ ನಿರ್ಮಾಣಕ್ಕೆ ಸುಪ್ರೀಂಕೋರ್ಟ್ ಹಸಿರು ನಿಶಾನೆ ತೋರಿದ ಬೆನ್ನಲ್ಲೇ ಉತ್ತರಪ್ರದೇಶದ ಯೋಗಿ ಆದಿತ್ಯನಾಥ್ ಸರ್ಕಾರ ಪ್ರವಾಸಿಗರನ್ನು ಸೆಳೆಯಲು ಅನೇಕ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಇವರಲ್ಲಿ ಇಕ್ಷ್ವಾಕುಪುರಿ ಯೋಜನೆಯೂ ಒಂದಾಗಿದ್ದು, ಸರಯೂ ನದಿ ದಡದಲ್ಲಿನ ಗುಪ್ತಾರ್ ಘಾಟ್‌ನಿಂದ ಬ್ರಹ್ಮಕುಂಡ್ ಗುರುದ್ವಾರದವರೆಗಿನ ಪ್ರದೇಶವನ್ನು ಇಕ್ಷ್ವಾಕುಪುರಿ ಗ್ರೀನ್ ಸಿಟಿಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಅಯೋಧ್ಯೆ ರಾಷ್ಟ್ರೀಯ ಹೆದ್ದಾರಿಯಿಂದ ಗುಪ್ತಾರ್ ಘಾಟ್‌ಗೆ 4 ಪಥದ ರಸ್ತೆಯ ಮೂಲಕ ಸಂಪರ್ಕ ಕಲ್ಪಿಸಲಾಗುತ್ತಿದೆ. ಇಲ್ಲಿ ಇಕ್ಷ್ವಾಕು ವಂಶದ ರಾಜರು, ಮನುನಿಂದ ದಶರಥ ಮಹಾರಾಜರವರೆಗಿನ ಅವರ ಜೀವನ ಚರಿತ್ರೆಯ ಐತಿಹಾಸಿಕ ಚಿತ್ರಗಳು, ಕಿರುಚಿತ್ರಗಳು, ಸಾಕ್ಷ್ಯಚಿತ್ರಗಳು, ಡಿಜಿಟಲ್ ಪುಸ್ತಕಗಳು ಇತ್ಯಾದಿಗಳನ್ನು ನಿರ್ಮಿಸಲಾಗುತ್ತದೆ. ವಿಶೇಷವಾಗಿ ಭಗವಾನ್ ಶ್ರೀರಾಮನ ಜೀವನ ಚರಿತ್ರೆಗೆ ಸಂಬಂಧಿಸಿದ ಘಟನೆಗಳನ್ನು ಚಿತ್ರಿಸಲಾಗುತ್ತದೆ. ಇಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮಿಕತೆ ಸಂಗಮವಿರುತ್ತದೆ ಎಂದು ಸಿಎಂ ವಿಶೇಷಾಧಿಕಾರಿ ಸಂಜೀವ್ ಸಿಂಗ್ ತಿಳಿಸಿದ್ದಾರೆ. ಶ್ರೀರಾಮನನ್ನು ನಂಬುವವರು ಭಾರತ ಸೇರಿ 100ಕ್ಕೂ ಹೆಚ್ಚು ದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇಕ್ಷ್ವಾಕುಪುರಿ ಗ್ರೀನ್ ಸಿಟಿ ಪೂರ್ವ ಏಷ್ಯಾದ ಹಿಂದೂ ವಾಸ್ತುಶಿಲ್ಪ ಶೈಲಿ ಮತ್ತು ಭಾರತದಲ್ಲಿ ದೇವಾಲಯ ನಿರ್ಮಾಣದ ನಾಗರಿಕತೆ, ದ್ರಾವಿಡ ಮತ್ತು ಬಸರ್ ಶೈಲಿಗಳನ್ನು ಹೊಂದಿರುತ್ತವೆ ಎಂದು ತಿಳಿಸಿದ್ದಾರೆ. ಅಯೋಧ್ಯೆ ಅಭಿವೃದ್ಧಿಗಾಗಿ ಯೋಗಿ ಆದಿತ್ಯನಾಥ್ ಸರ್ಕಾರ ವಿಮಾನ ನಿಲ್ದಾಣ, ಹೆದ್ದಾರಿಗಳು, ನಗರಗಳ ಅಭಿವೃದ್ಧಿ ಸೇರಿ ಈಗಾಗಲೇ ಅನೇಕ ಯೋಜನೆಗಳನ್ನು ಪ್ರಾರಂಭಿಸಿದೆ.

ಅರ್ಜಿಯನು ತಿರಸ್ಕರಿಸುವ